2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತುಂ ಜೆ ಎಂ ಎಫ್ ಸಿ
ನ್ಯಾಯಾಲಯ ರಾಣೇಬೆನ್ನೂರು
ಸಿ.ಸಿ.ನಂಃ 199/2026

ಫಿರ್ಯಾದಿಃ ಸರ್ಕಾರ

ವಿರುದ್ಧ

ಆರೋಪಿತರುಃ 1. ರುದ್ರಪ್ಪ ಈರಪ್ಪ ಪೂಜಾರ,
ವಯಾಃ 60 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಅಂತರವಳ್ಳಿ, ತಾಃರಾಣೇಬೆನ್ನೂರು.
2. ತಿಮ್ಮಣ್ಣ ರುದ್ರಪ್ಪ ಪೂಜಾರ ,
ವಯಾಃ 32 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಅಂತರವಳ್ಳಿ, ತಾಃರಾಣೇಬೆನ್ನೂರು.
3. ಗಂಗಾಧರ ರುದ್ರಪ್ಪ ಪೂಜಾರ,
ವಯಾಃ 30 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಅಂತರವಳ್ಳಿ, ತಾಃರಾಣೇಬೆನ್ನೂರು.

- ದೋಷಾರೋಪಣೆ -

ನಾನು ಶ್ರೀ ಬಿ ಆರ್ ಮುತಾಲಿಕ ದೇಸಾಯಿ 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ರಾಣೇಬೆನ್ನೂರು, ಮೇಲೆ ನಮೂದಿಸಿದ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ–

ದಿನಾಂಕ 11.01.2025 ರಂದು ಮಧ್ಯಾಹ್ನ 03.00 ಗಂಟೆ ಸುಮಾರಿಗೆ, ಅಂತರವಳ್ಳಿ ಗ್ರಾಮದ ಅಪ್ಪರ್ ತುಂಗಾ ಚಾನಲ್ ದ ಹತ್ತಿರ ಆರೋಪಿತರಾದ ನೀವು ಏಕೊದ್ದೇಶದಿಂದ ಒಂದುಗೂಡಿ ಚಾ ಸಾ 4 ರವರ ಕೊರಳ ಪಟ್ಟಿ ಹಿಡಿದು ಕೈಗಳಿಂದ ಹೊಡೆದು ಬಲಗೈ ತಿರುವಿ ಸ್ವ ಇಚ್ಛೆಯಿಂದ ಸಾದಾ ಗಾಯ ಉಂಟು ಮಾಡಿ ಆ

ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 115(1) ಸಹ ಕಲಂ 3(5) ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತಿರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಒಂದುಗೂಡಿ ನೀವು ಚಾ ಸಾ 4 ರವರಿಗೆ ಕೋಲಿನಿಂದ ಎದೆಗೆ, ಹೊಟ್ಟೆಗೆ, ಮೈಕೈಗೆ ಹೊಡೆದು ಸ್ವ ಇಚ್ಚೆಯಿಂದ ಸಾದಾ ಗಾಯ ಉಂಟು ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 118(1) ಸಹಕಲಂ 3(5) ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತಿರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ನೀವು ಏಕೋದ್ದೇಶದಿಂದ ಒಂದುಗೂಡಿ ಚಾಸಾ-1 ಮತ್ತು 4 ರವರಿಗೆ ಉದ್ದೇಶ ಪೂರ್ವಕವಾಗಿ ಅವಾಚ್ಯ ಶಬ್ದಗಳಿಂದ ಬೈದು, ಅವಮಾನ ಮಾಡಿ, ಶಾಂತತಾ ಭಂಗ ಉಂಟು ಮಾಡಲು ಪ್ರಚೋದಿಸಿ ಆ ಮೂಲಕ ಭಾ.ನ್ಯಾಸಂಹಿತೆ ಕಲಂಃ352 ಸಹಕಲಂಃ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುವಿರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಏಕೋದ್ದೇಶದಿಂದ ಒಂದುಗೂಡಿ ಚಾಸಾ- 1 ಮತ್ತು 4 ರವರಿಗೆ ಜೀವ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಉಂಟು ಮಾಡಿ ಆ

ಮೂಲಕ ಭಾ.ನ್ಯಾಸಂಹಿತೆ ಕಲಂಃ 351(2) ಸಹಕಲಂಃ 3(5) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುವಿರಿ.

ಆದ್ದರಿಂದ ಆರೋಪಿತರಾದ ನೀವು ಈ ಮೇಲಿನ ಆರೋಪಗಳಿಗಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಗಾಗತಕ್ಕದ್ದು ಎಂದು ಆದೇಶಿಸುತ್ತೇನೆ.

(ಈ ಮೇಲಿನ ಆರೋಪಗಳನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ, ಅವರ ಉತ್ತರಗಳನ್ನು ದಾಖಲಿಸಿಕೊಳ್ಳಲಾಗಿದೆ.)

**ಸ್ಥಳಃ ರಾಣೇಬೆನ್ನೂರು** **1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ದಿನಾಂಕಃ 07.04.2026.** **ಮತ್ತು ಜೆ.ಎಂ.ಎಫ್.ಸಿ. ರಾಣೇಬೆನ್ನೂರು**